**Sunday 28th August 2022, Page No.01**

## Convocation at RVCE: Graduation to 1455 Students

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

### ಡಾ. ದೇಬಬ್ರತ ದಾಸ್ ಆಶಯ | ಆರ್.ವಿ. ಕಾಲೇಜ್‌ನಲ್ಲಿ ಘಟಿಕೋತ್ಸವ

# ಹೊಸ ಎತ್ತರಕ್ಕೆ ವೃತ್ತಿಜೀವನ ಸಾಗಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕಠಿಣ ಪರಿಶ್ರಮ, ನಿಖರ ಮನೋಭಾವ ಮತ್ತು ಸಮಗ್ರತೆಯು ವಿದ್ಯಾರ್ಥಿಗಳ ವೃತ್ತಿ ಜೀವನವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಬೆಂಗಳೂರಿನ ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ನಿರ್ದೇಶಕ ಡಾ. ದೇಬಬ್ರತ ದಾಸ್ ಕಿವಿಮಾತು ಹೇಳಿದ್ದಾರೆ.

ಮೈಸೂರು ರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಶನಿವಾರ ನಡೆದ ಆರ್‌ವಿ ತಾಂತ್ರಿಕ ಮಹಾವಿದ್ಯಾಲಯ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಉತ್ತಮ ಆರೋಗ್ಯದೊಂದಿಗೆ ಕಾರ್ಯಕ್ಷೇತ್ರ ಜ್ಞಾನ ಹಾಗೂ ಕೌಶಲಭರಿತ ಶಿಕ್ಷಣವು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ವೃತ್ತಿಯಲ್ಲಿ ವೈಫಲ್ಯ ಅನುಭವಿಸಿದ್ದರೂ ಧೃತಿಗೆಡದೆ ಮತ್ತೆ ಪ್ರಯತ್ನಿಸುವ ಮೂಲಕ ಯಶಸ್ಸಿನ ಮೆಟ್ಟಿಲು ಹತ್ತಬೇಕು. ವಿನಮ್ರತೆ ಮತ್ತು ವೈಫಲ್ಯದ ಸಮಯದಲ್ಲಿ ತಾಳ್ಮೆ ಅಳವಡಿಸಿಕೊಂಡರೆ ವಿದ್ಯಾರ್ಥಿಯ ಜೀವನವು ಉತ್ತಮಗೊಳ್ಳುವ ಜತೆಗೆ ವೃತ್ತಿಜೀವನವು ಹೊಸ ಎತ್ತರಕ್ಕೆ ಕೊಂಡೊಯ್ಯುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ದೇಬಬ್ರತ ದಾಸ್ ಹೇಳಿದರು.

ಕೌಶಲ ಮತ್ತು ಮೂಲ ಜ್ಞಾನದ ನಡುವಿನ ತಿಳಿವಳಿಕೆಯ ವಿಷಯಗಳನ್ನೂ ಉಲ್ಲೇಖಿಸುವುದು ವಿದ್ಯಾರ್ಥಿಗಳ ವೃತ್ತಿಜೀವನದಲ್ಲಿ ಮುಖ್ಯವಾಗಿದೆ. ಉತ್ಪನ್ನಗಳ ಅಭಿವೃದ್ಧಿ, ಹೊಸ ಆಲೋಚನೆಗಳು ಮತ್ತು ಆವಿಷ್ಕಾರಗಳನ್ನು ಕಾರ್ಯಗತಗೊಳಿಸಲು ವಿದ್ಯಾರ್ಥಿಗಳು ಚೆನ್ನಾಗಿ ಕೌಶಲವನ್ನು ಕಲಿಯಬೇಕೆಂದು ಸಲಹೆ ನೀಡಿದರು.



ವಿಜಯವಾಣಿ ಚಿತ್ರಗಳು

ಮೈಸೂರು ರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ 29 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಡಾ. ದೇಬಬ್ರತ ದಾಸ್, ಕೆ.ಸಿ. ರಾಮಮೂರ್ತಿ, ಡಾ.ಎಂ.ಪಿ.ಶ್ಯಾಮ್ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸಂಸದ ಕೆ.ಸಿ. ರಾಮಮೂರ್ತಿ ಮಾತನಾಡಿ, ವೃತ್ತಿಪರ ಕಲಿಕೆಯಲ್ಲಿ 'ಆಳವಾದ ಮತ್ತು ಬದ್ಧವಾದ ಮೂಲಭೂತ ಅಂಶಗಳು' ವಿದ್ಯಾರ್ಥಿಗಳನ್ನು ಸವಾಲಿನ ವೃತ್ತಜೀವನಕ್ಕೆ ಪೂರಕವಾಗಿರುತ್ತದೆ. ಪದವೀಧರರಿಗೆ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುವ ಶಕ್ತಿ ಇದೆ. ಇಂಜಿನಿಯರ್‌ಗಳು ಸುಧಾರಿತ ತಾಂತ್ರಿಕ ಕೌಶಲಗಳೊಂದಿಗೆ ರಾಷ್ಟ್ರ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಇದು ಸಮುದಾಯ ಮತ್ತು ಸಮಾಜದ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದರು.

### 1,455 ವಿದ್ಯಾರ್ಥಿಗಳಿಗೆ ಪ್ರದಾನ

**ಎಂ.ಟೆಕ್ ಮತ್ತು ಎಂಸಿಎ 17 ಸ್ನಾತಕೋತ್ತರರು ಹಾಗೂ ಬಿಇ 12 ಪದವೀಧರರು ಸೇರಿ ಒಟ್ಟು 29 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. ವಿವಿಧ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಮುಗಿಸಿದ ಒಟ್ಟು 1,455 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.**

ಪ್ರತಿಯೊಬ್ಬ ಇಂಜಿನಿಯರ್ ವಿದ್ಯಾರ್ಥಿಗಳು ಸಮರ್ಪಣಾ ಭಾವ, ಬದ್ಧತೆ ಮತ್ತು ಶಿಸ್ತು ಹೊಂದಿರಬೇಕು. ಜತೆಗೆ, ಸಮಾಜದ ಕಲ್ಯಾಣಕ್ಕೆ ಕೊಡುಗೆ ನೀಡುವಂತಾಗಬೇಕು ಎಂದರು. ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಉಪಾಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ, ಸಿ.ವಿನೋದ್ ಹಯಗ್ರೀವ್, ಗೌರವ ಕಾರ್ಯದರ್ಶಿ ಡಾ.ಎವಿಎಸ್ ಮೂರ್ತಿ, ಗೌರವ ಉಪಕಾರ್ಯದರ್ಶಿ ಡಿ.ಪಿ.ನಾಗರಾಜ್, ಆರ್‌ವಿ ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ ಉಪಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ, ಆಡಳಿತ ಮಂಡಳಿ ಸಿಬ್ಬಂದಿ ಮತ್ತಿತರರಿದ್ದರು.



ಆರ್.ವಿ. ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ನಡೆದ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು.

Bengaluru Edition
Aug 28, 2022 Page No. 2